# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

### ವಾರ್ಡ್ ನಂ.71 :ಹೆಗ್ಗನಹಳ್ಳಿ

**ದಿನಾಂಕ: 04.06.2022 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಬಿ.ಆರ್.ರವಿಕುಮಾರ್, ನೋಡಲ್ ಅಧಿಕಾರಿ, ವಾರ್ಡ್ 71 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಬಿ.ಆರ್.ರವಿಕುಮಾರ್ | ನೋಡಲ್ ಅಧಿಕಾರಿ-ವಾರ್ಡ್ ನಂ.71 |
| 2 | ಜಯಂತ್‌ಕುಮಾರ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು-ವಾರ್ಡ್ 71 |
| 3 | ವೆಂಕಟರಾಜು | ಸದಸ್ಯರು |
| 4 | ಎನ್ ನಟರಾಜ್ | ಸದಸ್ಯರು |
| 5 | ಗಂಗರೆಡ್ಡಿ | ಕಂದಾಯ ಪರಿವೀಕ್ಷಕರು |
| 6 | ರಾಮಣ್ಣ | ಹಿರಿಯ ಆರೋಗ್ಯ ಪರಿವೀಕ್ಷಕರು |
| 7 | ಎನ್ ಮುರುಳಿ | ಕಂದಾಯ ವಸೂಲಿಗಾರರು |
| 8 | ಕೆ.ಎಲ್ ಮುರುಳೀಧರ್ | ಕಂದಾಯ ಪರಿವೀಕ್ಷಕರು |
| 9 | ನಂದೀಶ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |

**:ನಡಾವಳಿಯ ವರದಿ:**

➢ ಕಾರ್ಯದರ್ಶಿಗಳಾದ ಶ್ರೀ ಜಯಂತ್‌ಕುಮಾರ್ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- **ವಿಷಯ ಸಂಖ್ಯೆ: 1 :- 2022-23ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3726ರಲ್ಲಿ ಅನುದಾನವನ್ನು ಹಂಚಿಕೆ ಮಾಡಿಕೊಂಡಿರುವಂತೆ ವಾರ್ಡ್ 71ರ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಯನ್ನು ತಯಾರಿಸಿರುವ ಬಗ್ಗೆ**

ಶ್ರೀ ಜಯಂತ್ ಕುಮಾರ್, ವಾರ್ಡ್ ನಂ.71ರ ಸಹಾಯಕ ಅಭಿಯಂತರರು ಮಾತನಾಡಿ 2022-23ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3726ರಲ್ಲಿ ರೂ.570.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದ್ದು, ಸದರಿ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾಯೋಜನೆಪಟ್ಟಿಯನ್ನು ಸಭೆಯಲ್ಲಿ ಮಂಡಿಸಿದರು.

ಸದರಿ ವಿವರ ಈ ಕೆಳಕಂಡಂತಿದೆ.

| Sl. No. | Particulars | P Code | Name of Work | Estimated Cost (Rs.in Lakhs) |
|---|---|---|---|---|
| 1 | ಮಳೆ ಪ್ರವಾಹ ತಡೆಗಟ್ಟುವಿಕೆ ಮತ್ತು ಮುನ್ನೆಚ್ಚರಿಕೆಗೆ ಸಂಬಂಧಿಸಿದ ಕಾಮಗಾರಿಗಳಿಗೆ | P3726 | Construction of drain and Culvert in 15th Cross, Bhyraveshwara Industrial Area, Lakshaman Nagara & Sanjeevini Nagara 3rd stage in Ward No.71, Hegganahalli | 40.00 |
| 2 | ಪಾದಚಾರಿ ಮಾರ್ಗಗಳ ದುರಸ್ಥಿ ಮತ್ತು ನಿರ್ವಹಣೆ ಕಾಮಗಾರಿಗಳಿಗೆ | P3726 | Repairs and Maintenance of footpath at Neelagirithopu Main road, KTG Main Road, Srigandha nagara and surroudning roads in Ward No.71 | 30.00 |
| 3 | ಇತರೆ ಕಾಮಗಾರಿಗಳಿಗೆ ಹಂಚಿಕೆಯಾದ ಅನುದಾನ | P3726 | Improvements to Roads and Drains at Maruthi Nagara, Friends Colony, Shivananda Nagara and surrounding roads in Ward No.71 | 100.00 |
| 4 | | P3726 | Improvements to Roads and Drains at Hoysala Nagara, Sunkadakatte, Lakshman Nagara and surrounding area in Ward No.71 | 100.00 |
| 5 | | P3726 | Improvements to Roads and Drains at Nadakerappa Industrial Area and Omshakthi Temple main road & its surrouding area in Ward No.71 | 100.00 |
| 6 | | P3726 | Improvements to Roads and Drains at Bhyraveshwara Industrial Area, Sanjeevini Nagara 3rd stage and its surrouding area in Ward No.71 | 100.00 |
| 7 | | P3726 | Improvements to Roads and Drains at Sanjeevini Nagara 1st stage and Sanjeevini Nagara 2nd stage its surrouding area in Ward No.71 | 100.00 |
| **TOTAL AMOUNT** | | | | **570.00** |

ಸದರಿ ಕ್ರಿಯಾಯೋಜನೆಯನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

<u>ವಿಷಯ ಸಂಖ್ಯೆ: 2 :- ಕಾಂಕ್ರೀಟ್ ರಸ್ತೆ ಅಭಿವೃದ್ಧಿಸುವ ಬಗ್ಗೆ</u>

ಸದಸ್ಯರಾದ ನಟರಾಜ್ ರವರು ಮಾತನಾಡಿ, ಗೋವಿಂದಪ್ಪ ಬೇಕರಿ ಹಿಂಭಾಗದ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ಒಳಚರಂಡಿ ಅಳವಡಿಸಲು ಅಗೆದಿದ್ದ ರಸ್ತೆಯನ್ನು ದುರಸ್ಥಿ ಮಾಡಿರುವುದಿಲ್ಲ. ಇದರಿಂಧಾಗಿ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ರಸ್ತೆ ದುರಸ್ಥಿಪಡಿಸುವಂತೆ ಮನವಿ ಸಲ್ಲಿಸಿದರು.

ಇದಕ್ಕೆ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮಾತನಾಡಿ ಸದರಿ ರಸ್ತೆಯಲ್ಲಿ ವೆಟ್ ಮಿಕ್ಸ್ ಅಳವಡಿಸಲಾಗಿದೆ, ಶೀಘ್ರದಲ್ಲಿಯೇ Restoration ಮಾಡಲಾಗುವುದು ಎಂದು ತಿಳಿಸಿದರು.

ವಿಷಯ ಸಂಖ್ಯೆ: 3 :-ರಸ್ತೆಗುಂಡಿಗಳ ಬಗ್ಗೆ

ಇತ್ತೀಚೆಗೆ ಸುರಿದ ಮಳೆಯಿಂದಾಗೀ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿದ್ದು, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ಇದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ, ವಾರ್ಡ್ 71 ರ ವ್ಯಾಪ್ತಿಯ ರಸ್ತೆಗಳಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಪಾಲಿಕೆಯ Fix My Street App ನ್ನಲ್ಲಿ ಪ್ರತಿಯೊಂದು ರಸ್ತೆಗುಂಡಿಯ ಚಿತ್ರಸಹಿತ ವಿವರಗಳನ್ನು ದಾಖಲಿಸಿದ್ದು, ಈಗಾಗಲೇ ರಸ್ತೆಗುಂಡಿಗಳನ್ನು ಮುಚ್ಚುವ ಕಾಮಗಾರಿಯು ಪ್ರಗತಿಯಲ್ಲಿದ್ದು, ನೀಲಗಿರಿ ತೋಪು ರಸ್ತೆ ಮತ್ತು ಕೆ.ಟಿ.ಜಿ ರಸ್ತೆಯಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಮುಚ್ಚಲಾಗಿದೆ ಎಂದು ತಿಳಿಸಿದರು.

- ವಿಷಯ ಸಂಖ್ಯೆ: 4 :-ಉದ್ಯಾನವನಗಳಲ್ಲಿನ ಜಿಮ್ ಉಪಕರಣಗಳು ಹಾಳಾಗಿರುವ ಬಗ್ಗೆ

ಸದಸ್ಯರಾದ ವೆಂಕಟರಾಜುರವರು ಮಾತನಾಡಿ, ವಾರ್ಡ್ ನಂ.71ರ ವ್ಯಾಪ್ತಿಯಲ್ಲಿರುವ ಉದ್ಯಾನವನ-2ರಲ್ಲಿ ಅಳವಡಿಸಿರುವ ಜಿಮ್ ಉಪಕರಣಗಳು ಹಾಳಾಗಿದ್ದು, ಇವುಗಳನ್ನು ದುರಸ್ತಿ ಪಡಿಸಲು ಕೋರಿದರು.

ಇದಕ್ಕೆ ನೋಡಲ್ ಅಧಿಕಾರಿರವರು ಮಾತನಾಡಿ, ಉದ್ಯಾನವನಗಳಲ್ಲಿ ನಿರ್ವಹಣೆಯನ್ನು ಯೋಜನಾ ವಿಭಾಗ, ದಾಸರಹಳ್ಳಿ ರವರು ನಿರ್ವಹಿಸುತ್ತಿದ್ದು, ಈ ವಿಷಯವನ್ನು ಸದರಿಯವರ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

- ವಿಷಯ ಸಂಖ್ಯೆ: 5 :-ವಾರ್ಡ್ ವ್ಯಾಪ್ತಿಯಲ್ಲಿ ಔಷಧಿ ಸಿಂಪಡಣೆ ಸಮರ್ಪಕವಾಗಿ ನಡೆಯುತ್ತಿಲ್ಲದಿರುವುದರ ಬಗ್ಗೆ

ಸದಸ್ಯರಾದ ನಟರಾಜ್‌ರವರು ಮಾತನಾಡಿ, ವಾರ್ಡ್ ನಂ.71ರ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಔಷಧಿ ಸಿಂಪಡಣೆ ಮಾಡುವ ಕಾರ್ಯವನ್ನು ನಿರ್ವಹಿಸುತ್ತಿಲ್ಲ. ಈ ಬಗ್ಗೆ ಸಂಬಂಧಪಟ್ಟವರು ವಿರುದ್ಧ ಕ್ರಮಕೈಗೊಳ್ಳುವಂತೆ ಕೋರಿದರು.

ಇದಕ್ಕೆ ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರವನ್ನುದ್ದೇಶಿಸಿ ಮಾತನಾಡಿ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಮುಂದಿನ ಸಭೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಹಾಜರಾಗಿ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ನೀಡಲು ಸೂಚಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾಅಧಿಕಾರಿ/ನೌಕರರಿಗೆ ಮತ್ತು ಸದಸ್ಯರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡ್ ನಂ.71ರ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಜಯಂತ್‌ಕುಮಾರ್‌ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ಮತ್ತು ಸದಸ್ಯರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ.71, ಹೆಗ್ಗನಹಳ್ಳಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ವಾರ್ಡ್ ಸಮಿತಿ ಅಧ್ಯಕ್ಷರು**
**ಹಾಗೂ ವಾರ್ಡ್‌ನ ನೋಡಲ್‌ಅಧಿಕಾರಿ**
**ವಾರ್ಡ್ ನಂ.71, ಹೆಗ್ಗನಹಳ್ಳಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:**

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ರವರ ಆದ್ಯ ಗಮನಕ್ಕೆ ಕಳುಹಿಸಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
7) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.71 ರವರ ಮಾಹಿತಿಗಾಗಿ
8) ವಾರ್ಡ್ ಸಮಿತಿ ಸಭೆಯ ಸದಸ್ಯರಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಕಡತಕ್ಕೆ